ವಸತಿ ಶಾಲೆಗಳು

2649 (2246); ಶ್ರೀ ಬಣಕಾರ್ .ಯು.ಬಿ (ಹಿರೇಕೆರೂರು)

ಅ) 2014–15ನೇ ಸಾಲಿನಲ್ಲಿ 100 ವಸತಿ ಶಾಲೆಗಳನ್ನು ಪ್ರಾರಂಭ ಮಾಡಲು ಸರ್ಕಾರ ನಿರ್ಧಾರ ಮಾಡಿರುವುದು ನಿಜವೇ;

ಆ) ಈವರೆಗೆ ಎಷ್ಟು ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ;

ಇ) ಹಾಗಾದರೆ, ಯಾವಾಗ ಎಲ್ಲಿ ಈ ಶಾಲೆಗಳನ್ನು ಪ್ರಾರಂಭಿಸಲಾಗಿದೆಯೇ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ) ಹೌದು

ಆ) ಇಲ್ಲ

ಇ) ಅ) 2014–15 ನೇ ಸಾಲಿನಲ್ಲಿ 100 ಹೊಸ ವಸತಿ ಶಾಲೆಗಳನ್ನು ಪ.ಜಾ ಮತ್ತು ಪ.ವರ್ಗದವರಿಗೆ ಮಂಜೂರು ಮಾಡಲು ಆಯವ್ಯಯದಲ್ಲಿ ಘೋಷಿಸಲಾಗಿದ್ದು, 75 ಪ.ಜಾ ಮತ್ತು 25 ಪ.ವರ್ಗದ ವಸತಿ ಶಾಲೆಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಜಮೀನು ಲಭ್ಯತೆ, ಶಿಕ್ಷಕರ ನೇಮಕಾತಿ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಂಡು ಹೊಸ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು.